## ವಚನ ಅರಿವು

### ಫಲ

ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ?
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ?
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ?
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ?
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ?
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ
ಚೆನ್ನಮಲ್ಲಿಕಾರ್ಜುನಾ.

– ಅಕ್ಕಮಹಾದೇವಿ

ಈ ವಚನ ಓದಿದ ತಕ್ಷಣ ಅರ್ಥ ಮಾಡಿಕೊಳ್ಳುವಷ್ಟು ಸರಳವಾಗಿದೆ. ಸಮಾಜದಲ್ಲಿನ ಸ್ವಹಿತ ಮನಸ್ಥಿತಿಯವರ ವರ್ತನೆಯನ್ನು, ಅವಗುಣಗಳನ್ನು ಕುರಿತು ಅಕ್ಕ ಈ ವಚನದಲ್ಲಿ ಹೇಳಿದ್ದಾಳೆ. ಇದು ಎಲ್ಲಾ ಕಾಲದ ಮನುಷ್ಯನ ಮನಸ್ಥಿತಿಯಾಗಿದೆ.

ಮರ ದೊಡ್ಡದಾಗಿ ಬೆಳೆದು ಅದು ನೆರಳು ಕೊಡದಿದ್ದರೆ ಅಥವ ಆ ನೆರಳಿನಲ್ಲಿ ಜನರು, ಪ್ರಾಣಿ–ಪಕ್ಷಿಗಳು ಆಶ್ರಯ ಪಡೆಯದಿದ್ದರೆ ಆ ಮರವೇ ವ್ಯರ್ಥ. ಶ್ರೀ ಮಂತರಲ್ಲಿ ಸಾಕಷ್ಟು ಹಣವಿರುತ್ತದೆ ಅವನು ಹಣ ಗಳಿಸಿಕೊಳ್ಳಲು ಮತ್ತೆ ಮತ್ತೆ ಹವಣಿಸುತ್ತಿರುತ್ತಾನೆ ಇನ್ನೊಬ್ಬರಿಗೆ ತೊಂದರೆ ಕೊಟ್ಟಾದರೂ ಸರಿ. ಅವನಿಗೆ ದೀನ ದುರ್ಬಲರ ಮೇಲೆ ದಯೆ, ಕರಣೆ ಇರುವುದಿಲ್ಲ, ಇಂತಹವರ ಶ್ರೀಮಂತಿಕೆ ಯಾವ ಪ್ರಯೋಜಕ್ಕೆ ಬರುವುದಿಲ್ಲ. ಮನೆಯಲ್ಲಿ ಹಾಲು, ತುಪ್ಪ, ಮೊಸರು ಉಣ್ಣಬೇಕೆಂದು ಆಕಳು ಸಾಕಿದ್ದರೆ, ಆ ಆಕಳು ಗೊಡ್ಡಾಗಿದ್ದರೆ ಆಕಳಿದ್ದು ಏನು ಫಲ. ಮನುಷ್ಯನಿಗೆ ಸುಂದರ ರೂಪ ಇದ್ದರೆ ಸಾಲದು ಒಳ್ಳೆಯತನ, ಪ್ರಾಮಾಣಿಕತೆ, ದಯೆ, ಕರುಣೆ, ಪ್ರೀತಿ, ತನ್ನಂತೆ ಪರರು ಎಂಬ ಭಾವನೆ ಇರಬೇಕು. ರೂಪದಿಂದ ಅಹಂಕಾರ, ದಾರ್ಷ್ಟ್ಯ ತುಂಬಿಕೊಂಡರೆ ಸುಂದರ ರೂಪವಿದ್ದು ಏನು ಫಲ. ತಟ್ಟೆ ಕೈಯಲ್ಲಿದೆ. ಉಣ್ಣಲು ಅನ್ನವೇ ಇಲ್ಲ ಎಂದರೆ ಆ ತಟ್ಟೆಯಿಂದೇನೂ ಹೊಟ್ಟೆ ತುಂಬುವುದಿಲ್ಲ. ಈ ದೇಹವನ್ನು ಧರಿಸಿ ಮನುಷ್ಯ ಇದ್ದಾನೆ ಆದರೆ ಈ ಜಗತ್ತಿನ ಚೈತನ್ಯ ಶಕ್ತಿಯಾದ ಶಿವನ ಅರಿವು ಅಥವ ತನ್ನತಾನರಿಯುವ ಗುಣ ಇಲ್ಲದಿದ್ದರೆ ಮನುಷ್ಯನಾಗಿ ಹುಟ್ಟಿ ಪ್ರಯೋಜನವಿಲ್ಲ ಎನ್ನುತ್ತಾಳೆ ಅಕ್ಕಮಹಾದೇವಿ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಬೆಳಕಿನ ಹಾದಿ

### ಹನಿ ನೀರು



■ ಆರ್.ಬಿ.ಗುರುಬಸವರಾಜ ಹೊಳಗುಂದಿ

ಒಂದು ಶುದ್ಧ ನೀರಿನ ಜಾರ್ ಇತ್ತು. ಅದರಲ್ಲಿ ಸಾವಿರಾರು ಹನಿಗಳಿದ್ದವು. ಜಾರ್‌ನಲ್ಲಿನ ಪ್ರತಿ ಹನಿ ನೀರು ತುಂಬಾ ಸ್ಪಷ್ಟ ಮತ್ತು ಶುದ್ಧವಾಗಿತ್ತು. ಅದಕ್ಕಾಗಿ ಪ್ರತಿ ಹನಿಯೂ ಹೆಮ್ಮೆ ಪಡುತ್ತಿದ್ದವು. ದಿನದಿಂದ ದಿನಕ್ಕೆ ಅವು ಸ್ವಚ್ಛವಾಗಿರುವುದಕ್ಕೆ ಪರಸ್ಪರ ಅಭಿನಂದಿಸಿಕೊಳ್ಳುತ್ತಿದ್ದರು.

ಒಂದು ದಿನ ಜಾರ್‌ನಲ್ಲಿನ ಒಂದು ಹನಿಗೆ ತನ್ನ ಶುದ್ಧತೆಯ ಅಸ್ತಿತ್ವದಿಂದ ಬೇಸರವಾಯಿತು. ಅದರಿಂದ ಹೊರಬರುವ ಮನಸ್ಸಾಯಿತು. ಅದಕ್ಕಾಗಿ ಅದು ಕೊಳಕು ನೀರಿನ ಸಹವಾಸ ಹೇಗಿರುತ್ತದೆ ನೋಡಬೇಕೆನಿಸಿತು. ಅದು ಶುದ್ಧ ನೀರಿನ ಜಾರ್‌ನಿಂದ ಜಾರಿ ಹೋಗಿ ಕೊಳಚೆ ನೀರಿನ ಸ್ನೇಹ ಮಾಡಿತು. ಅದು ಅಲ್ಲಿಗೆ ಹೋಗಿದ್ದೇ ತಡ ಸಂಪೂರ್ಣವಾಗಿ ಅದರ ಚಹರೆ ಬದಲಾಯಿತು. ಪಾರದರ್ಶಕವಾಗಿದ್ದ ಅದರ ಮೈ ಸಂಪೂರ್ಣವಾಗಿ ಮಾಸಲು ಬಣ್ಣ ಪಡೆಯಿತು. ಶುದ್ಧತೆ ಮಾಯವಾಗಿ ಅಶುದ್ಧವಾಯಿತು. ಅಹಿತಕರ ಬಣ್ಣ ಹಾಗೂ ವಾಸನೆ ಪಡೆಯಿತು. ಕೆಲವಾರು ನಿಮಿಷಗಳಲ್ಲಿಯೇ ಆ ಜೀವನ ಸಾಕು ಸಾಕಾಯಿತು. ತಕ್ಷಣವೇ ಅಲ್ಲಿಂದ ಹೊರಬಂದು ಮೊದಲಿನ ಶುದ್ದ ನೀರಿನ ಜಾರ್‌ಗೆ ಸೇರಿತು.

ಶುದ್ಧ ನೀರಿಗೆ ಅದು ಬಂದು ಸೇರಿದ ತಕ್ಷಣ ಶುದ್ದ ಜಾರ್ ಕೂಡಾ ಅಶುದ್ಧವಾಯಿತು. ಅದರಲ್ಲಿದ್ದ ಸಾವಿರಾರು ಶುದ್ಧ ನೀರಿನ ಹನಿಗಳು ಅಶುದ್ಧವಾದವು. ಪಾರದರ್ಶಕವಾಗಿದ್ದ ಜಾರ್ ಈಗ ಮಸುಕಾಯಿತು. ಬಣ್ಣ ಮತ್ತು ವಾಸನೆ ಎರಡೂ ಬದಲಾದವು.

ಈಗ ಜಾರ್‌ನಲ್ಲಿದ್ದ ಎಲ್ಲಾ ಹನಿಗಳು ಮೊದಲಿನ ಶುದ್ಧತೆ ಪಡೆಯಲು ತುಂಬಾ ಪ್ರಯತ್ನಿಸಿದವು. ಅದಕ್ಕಾಗಿ ತಮ್ಮ ಮೈಯನ್ನು ಹಿಂಡಿದವು. ಆದರೂ ಅವುಗಳು ಮೊದಲಿನಂತೆ ಆಗಲಿಲ್ಲ. ತಮ್ಮ ಮೈಗೆ ಅಂಟಿಕೊಂಡ ಕೊಳೆಯನ್ನು ಕಳೆಯಲು ಪ್ರಯತ್ನಿಸಿದವು. ಆದರೆ ಸಾಧ್ಯವಾಗಲಿಲ್ಲ. ಅಂತಿಮವಾಗಿ ಅವುಗಳೆಲ್ಲ ಒಂದು ಪ್ಲಾನ್ ಮಾಡಿದವು.

ಇಡೀ ಜಾರನ್ನು ನಳಕ್ಕೆ ಒಡ್ಡಿಕೊಳ್ಳಲು ಪ್ರಯತ್ನಿಸಿದವು. ಇದು ಒಂದು ರೀತಿಯ ಡಯಾಲಿಸಿಸ್ ಇದ್ದಂತೆ. ಅಂದರೆ ತಮ್ಮ ಇಡೀ ದೇಹವನ್ನು ಅಲುಗಾಡಿಸಿ ಅಲುಗಾಡಿಸಿ ಮೈಗೆ ಅಂಟಿಕೊಂಡ ಕೊಳೆಯನ್ನು ಕಳೆದುಕೊಳ್ಳುವುದು. ಇದು ತುಂಬಾ ತ್ರಾಸದಾಯಕ ಎಂಬುದು ಅವುಗಳಿಗೆ ತಿಳಿದಿತ್ತು. ಆದರೆ ಅನಿವಾರ್ಯವಾಗಿ ಈ ಪ್ರಕ್ರಿಯೆಗೆ ಒಳಗಾಗಲೇಬೇಕಿತ್ತು. ಜಾರನ್ನು ನಳದ ನೀರಿಗೆ ಒಡ್ಡಿಕೊಂಡವು. ನಳದಿಂದ ನೀರು ವೇಗವಾಗಿ ಜಾರಿನೊಳಗೆ ಬರುವಾಗ ಅದಕ್ಕೆ ತಮ್ಮ ಮೈ ಒಡ್ಡಿಕೊಂಡವು. ಬರುತ್ತಿದ್ದ ಶುದ್ದ ನೀರಿನ ಹನಿಗಳಿಗೆ ತಮ್ಮ ಮೈ ಉಜ್ಜಿಕೊಂಡು ಉಜ್ಜಿಕೊಂಡು ಅಂಟಿಕೊಂಡ ಕೊಳೆಯನ್ನೆಲ್ಲಾ ಕಳೆದುಕೊಂಡವು. ಹೀಗೆ ಪ್ರತಿಯೊಂದು ಹನಿಯೂ ಬಹಳ ಕಷ್ಟಪಟ್ಟು ತಮ್ಮನ್ನು ತಾವು ಸ್ವಚ್ಛಗೊಳಿಸಿಕೊಂಡವು. ತಮ್ಮದಲ್ಲದ ತಪ್ಪಿಗೆ ತಮ್ಮನ್ನು ತಾವು ಉಜ್ಜಿಕೊಂಡವು. ಒಂದು ಹನಿ ಮಾಡಿದ ತಪ್ಪಿಗಾಗಿ ಎಲ್ಲಾ ಹನಿಗಳು ತೊಂದರೆಗೆ ಒಳಗಾದವು.

ನಮ್ಮ ಜೀವನವೂ ಹಾಗೆ ಅಲ್ಲವೇ? ಸ್ನೇಹಿತರ ಆಯ್ಕೆಯಲ್ಲಿ ತಪ್ಪು ನಿರ್ಧಾರ ಮಾಡಿ ತೊಂದರೆಗೆ ಒಳಗಾಗದೇ ಯೋಗ್ಯರನ್ನು ಆಯ್ಕೆ ಮಾಡಿಕೊಳ್ಳಬೇಕಲ್ಲವೇ?

### ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ಅಂತರಾಷ್ಟ್ರೀಯ ಟೆನ್‌ಪಿನ್ ಆಟಗಾರ ಒಂಟಿ ಕೈ ಚನ್ನಕೇಶವ್ ಕ್ರೀಡಾಪಟುಗಳಿಗೆ ಮಾದರಿ. ಪ್ರತಿಭಾವಂತ ಕ್ರೀಡಾಪಟುಗಳಿಗೆ ಬೇಕಿದೆ ಕ್ರೀಡಾಪ್ರೇಮಿಗಳ ಮತ್ತು ಸರ್ಕಾರದ ಪ್ರೋತ್ಸಾಹ

# ಬಲಗೈ ಇಲ್ಲದಿದ್ದರೂ ಕುಗ್ಗದ ಆತ್ಮಬಲ

ಆರನೇ ತರಗತಿಯಲ್ಲಿ ಓದುತ್ತಿರುವಾಗಲೇ ಆಕಸ್ಮಿಕ ವಾಹನ ಅಪಘಾತದಲ್ಲಿ ತನ್ನ ಬಲಗೈಯನ್ನೇ ಸಂಪೂರ್ಣವಾಗಿ ಕಳೆದುಕೊಂಡ ಬಹುಮುಖ ಪ್ರತಿಭೆ ಮಂಡ್ಯ ಜಿಲ್ಲೆಯ ನಾಗಮಂಗಲದ ಚೆನ್ನಕೇಶವ ನಾಡು ಮೆಚ್ಚುವಂತ ಸಾಧನೆಗೈದಿದ್ದಾನೆ. ಈತನ ಕ್ರೀಡಾ ಸಾಧನೆಗಳನ್ನು ಕೇಳಿದವರು ಬೆರಗುಗೊಳ್ಳದೆ ಇರರು. ಎಲ್ಲವನ್ನು ಪಡೆದ ಮಕ್ಕಳ ಸಾಧನೆಗಿಂತ ತನ್ನ ಮುಖ್ಯ ಅಂಗಾಂಗವನ್ನೆ ಕಳೆದುಕೊಂಡರೂ ಜೀವನದಲ್ಲಿ ಜಿಗುಪ್ಸೆಗೊಳ್ಳದೇ, ಇತರರಿಗೂ ಮಾದರಿಯಾಗಿ ಸಾಧನೆಯ ಮೆಟ್ಟಿಲೇರಿರುವ ಚನ್ನಕೇಶವನ ಜೀವನದ ಹೋರಾಟ ಹೀಗಿದೆ.

ಬಹುಮುಖ ಪ್ರತಿಭೆ ಚೆನ್ನಕೇಶವ್ ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಜನಿಸಿದರು. ಇವರ ಕುಟುಂಬ ಜೀವನೋಪಾಯಕ್ಕಾಗಿ ಬೆಂಗಳೂರಿಗೆ ಬಂದು ನೆಲೆಸುತ್ತದೆ. 01 ರಿಂದ 7ನೇ ತರಗತಿವರೆಗೆ ಕೇಂಬ್ರಿಡ್ಜ್ ಇಂಗ್ಲಿಷ್ ಶಾಲೆ, ಶ್ರೀನಗರ 08 ರಿಂದ 10ನೇ ತರಗತಿವರೆಗೆ ಆರ್.ವಿ.ರೋಡ್ ನಲ್ಲಿರುವ ಬೆಂಗಳೂರು ಪ್ರೌಢಶಾಲೆಯಲ್ಲಿ ಪೂರೈಸುತ್ತಾರೆ. ಪಿ.ಯು.ಸಿ ಮತ್ತು ಬಿಕಾಂ ಪದವಿಯನ್ನು ಪೀಪಲ್ಸ್ ಎಜುಕೇಶನ್ ಸೊಸೈಟಿ ಇಲ್ಲಿ ಪೂರೈಸುತ್ತಾರೆ. 6ನೇ ತರಗತಿ ಓದುತ್ತಿರುವ ಸಮಯದಲ್ಲಿ ಜರುಗಿದ ಆಕಸ್ಮಿಕ ವಾಹನ ಅಪಘಾತ ಇವರ ಸಂಪೂರ್ಣ ಬಲಗೈಯನ್ನು ಕಸಿದುಕೊಂಡು ಅಂಗ ವೈಕಲ್ಯನನ್ನಾಗಿಸುತ್ತದೆ.

ಅಂಗವಿಕಲನಾದೇನಲ್ಲ ಎಂಬ ಕೊರಗಿನೊಂದಿಗೆ ಕಾಲವನ್ನು ತಳ್ಳುತ್ತಾ, ಒಮ್ಮೆ ತಮ್ಮ ಸ್ನೇಹಿತರೊಂದಿಗೆ ಮೈದಾನದಲ್ಲಿ ಆಟವಾಡುವಾಗ ಇವರನ್ನು ಗಮನಿಸಿದ ಹತ್ತಿರದ ಸಂಬಂಧಿಗಳಾದ ಬಸವರಾಜ ಮತ್ತು ಜಗದೀಶ್ ಕರ್ನಾಟಕ ಫಿಸಿಕಲ್ ಹ್ಯಾಂಡಿಕ್ಯಾಪ್ಡ್ ಅಸೋಸಿಯೇಷನ್ ಸಂಸ್ಥಾಪಕರಾದ ಎಂ.ಮಹಾದೇವ ಇವರ ಬಳಿ ಕರೆತರುತ್ತಾರೆ ಇವರ ಸಲಹೆ ಮೇರೆಗೆ ಕಂಠೀರವ ಸ್ಟೇಡಿಯಂ ನಲ್ಲಿರುವ ಕ್ರೀಡಾ ತರಬೇತುದಾರರಾದ ಡೇವಿಡ್ ಪ್ರೇಮ್ ನಾಥ್ ರವರ ಬಳಿ ಕ್ರೀಡಾ ತರಬೇತಿಗೆ ತಂದುಬಿಡುತ್ತಾರೆ. ತದನಂತರ ಕ್ರೀಡೆಯಲ್ಲಿ ಆಸಕ್ತಿ ಬೆಳೆಸಿಕೊಂಡು ಮೊದಮೊದಲು ಅಥ್ಲೆಟಿಕ್ಸ್, ಬ್ಯಾಡ್ಮಿಂಟನ್ನಲ್ಲಿ ನಂತರ ಟೆನ್ ಪಿನ್ ಎಂಬ ನವನವೀನ ಬೌಲಿಂಗ್ ಕ್ರೀಡೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು: 8747969381

Scan For Digital Colourful
HAMPI TIMES E-paper

2003 ರಲ್ಲಿ ಪ್ರಥಮ ಪದಕವನ್ನು ಪಡೆದುಕೊಳ್ಳುತ್ತಾರೆ. ಆ ಸಂದರ್ಭ ನನ್ನನ್ನು ಅಂಗವಿಕಲನ್ನಾಗಿ ಮಾಡಿದ್ದೆ ದೇವರು ಕ್ರೀಡೆಯಲ್ಲಿ ಸಾಧನೆ ಮಾಡಲಿಕ್ಕೆ ಎಂಬುದಾಗಿ ತಮ್ಮಲ್ಲಿ ತಾವು ಅಂದುಕೊಂಡು ಕ್ರೀಡಾ ಜರ್ನಿಯನ್ನು ಮುಂದುವರಿಸುತ್ತಾರೆ ಮುಂದೆ ನಡೆದಿದೆಲ್ಲವೂ ಭಗವಂತನ ಆಶೀರ್ವಾದವೇ ಸರಿ.

ಟೆನ್ ಪಿನ್ ಎಂಬ ಆಟವು ಪ್ರಪಂಚದ ಅತ್ಯಂತ ಜನಪ್ರಿಯ ಮನೋರಂಜನಾ ಆಟಗಳಲ್ಲಿ ಇದು ಕೂಡ ಒಂದು ಇದನ್ನು ಬೌಲಿಂಗ್ ಎಂತಲೂ ಕರೆಯುತ್ತಾರೆ. ಆಟಗಾರರು ಹತ್ತುಪಿನ್ ಗಳನ್ನು ಉರುಳಿಸುವ ಪ್ರಯತ್ನದಲ್ಲಿ ಲೇನ್ ಉದ್ದಕ್ಕೂ ಭಾರವಾದ ಚೆಂಡನ್ನು ಉರುಳಿಸುತ್ತಾರೆ ಇದನ್ನು ವೈಯಕ್ತಿಕ, ತಂಡದ ಕ್ರೀಡೆ ಎಂದು ಪರಿಗಣಿಸಲಾಗುತ್ತದೆ ಮತ್ತು ಅನೇಕ ಬೌಲರ್‌ಗಳು ಹವ್ಯಾಸಿ ಬೌಲಿಂಗ್ ಅಥವಾ ವೃತ್ತಿಪರ ಬೌಲಿಂಗ್ ಲೀಗ್‌ಗಳಲ್ಲಿ ಆಡುತ್ತಾರೆ.

ವಿನೂತನ ಆಟದಲ್ಲಿ ತಮ್ಮನ್ನು ತೊಡಗಿಸಿಕೊಂಡ ಇವರಿಗೆ ಬಡತನ ಎಂಬ ಭೂತ ಸಾಕಷ್ಟು ತೊಂದರೆಯನ್ನು ಕೊಡುತ್ತದೆ. ಈ ಆಟದ ಪರಿಕರವಾದ ಬಾಲನ್ನು ಖರೀದಿಸಬೇಕಾದರೆ 20 ರಿಂದ 25 ಸಾವಿರರೂಪಾಯಿಗಳು, ಒಂದು ಆಟದ ಸಂಪೂರ್ಣ ಕಿಟ್ ಖರೀದಿಸಬೇಕಾದರೆ 80 ರಿಂದ 90 ಸಾವಿರ ರೂಪಾಯಿ ತಗಲುತ್ತದೆ. ಸ್ನೇಹಿತರು ಹಾಗೂ ಆಟದ ಜೊತೆಗಾರರಾದ ಸುರ್ಜಿತ್ ಸಿಂಗ್, ವೇಣುಗೋಪಾಲ್ ಜೊತೆಗೂಡಿ ವೈಯಕ್ತಿಕವಾಗಿ ಸಾಲಮಾಡಿ ಪರಿಕರಗಳನ್ನು ಖರೀದಿಸಿದ್ದಾರೆ.

ವಿಶೇಷ,ವಿನೂತನ ಆಟವಾದ ಕಾರಣ ಯಾರು ತರಬೇತುದಾರರು ಸಿಗದೆ ಏಕಲವ್ಯರಂತೆ ಕಲಿಯಲು ಆರಂಭಿಸುತ್ತಾರೆ. ಯೌಟ್ಯೂಬ್ಗಳಲ್ಲಿ, ವಿಕಿಪೀಡಿಯಾಗಳಲ್ಲಿ ದೊರಕುವ ಸಾಹಿತ್ಯಗಳನ್ನು ಕ್ರೂಢೀಕರಿಸಿ ಆಟದ ನಿಯಮ ಮತ್ತು ಕೌಶಲ್ಯಗಳನ್ನು ಮೈಗೂಡಿಸಿಕೊಳ್ಳುತ್ತಾರೆ.

ಪ್ರಥಮ ಬಾರಿಗೆ ಮಲೇಶಿಯಾದಲ್ಲಿ ನಡೆದ ಕ್ರೀಡಾಕೂಟದಲ್ಲಿ ಭಾಗವಹಿಸಿ ಏಶಿಯನ್ ಚಾಂಪಿಯನ್ಶಿಪ್ಗೆ ಕ್ವಾಲಿಫೈ ಆಗುತ್ತಾರೆ.

2018 ಜರ್ಕಾತದಲ್ಲಿ ನಡೆದ ಪ್ಯಾರಾ ಏಷ್ಯನ್ ಗೇಮ್ಸ್ ನಲ್ಲಿ ಮೊದಲ ಬಾರಿಗೆ ಭಾರತದಿಂದ ಭಾಗವಹಿಸಿದ ಟೆನ್ ಪಿನ್ ಮೊಟ್ಟ ಮೊದಲ ಆಟಗಾರರಾಗಿದ್ದಾರೆ.

ಗೋಪಾಲನ್ ಆರ್ಕೇಡ್ ಬೆಂಗಳೂರು, ಜೆ.ಪಿ.ನಗರದಲ್ಲಿರುವ ಟೆನ್ ಪಿನ್ ಒಳಾಂಗಣ ಕ್ರೀಡಾಂಗಣದಲ್ಲಿ 01 ಗಂಟೆಗೆ 500 ರೂಪಾಯಿಗಳ ಹಣವನ್ನು ಕೊಟ್ಟು ಪ್ರಾಕ್ಟೀಸ್ ಮಾಡುತ್ತಿದ್ದರು. ಸದ್ಯ ದರದಲ್ಲಿನ ವ್ಯತ್ಯಾಸದಿಂದಾಗಿ ತರಬೇತಿಯನ್ನು ನಿಲ್ಲಿಸಿದ್ದಾರೆ.

ಏ.ಎನ್.ಜೆಡ್. ಪ್ರೈವೇಟ್ ಬ್ಯಾಂಕ್ ನಲ್ಲಿ ಕೆಲಸವನ್ನು ನಿರ್ವಹಿಸಿ ತಮ್ಮ ಕುಟುಂಬವನ್ನು ನೋಡಿಕೊಳ್ಳುವುದರೊಂದಿಗೆ ಕ್ರೀಡಾ ಖರ್ಚನ್ನು ನಿಭಾಯಿಸುವ ಹೊಣೆ ಇವರ ಮೇಲಿದೆ. ಇವರು ಈ ಕ್ರೀಡೆಯಲ್ಲಿ ಭಾಗವಹಿಸುವ ಸಂದರ್ಭದಲ್ಲಿ ಭಾರತದಲ್ಲಿ ಇದರ ಬಗ್ಗೆ ಸಾಕಷ್ಟು ಕಡಿಮೆ ತಿಳುವಳಿಕೆ ಇತ್ತು. ಅಂತರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸುವಾಗ ಮುಂದುವರೆದ ದೇಶದ ಆಟಗಾರರು ಭಾರತೀಯ ಆಟಗಾರರನ್ನು ಗಮನಿಸಿ ನಗುತ್ತಾ ಆಟದಲ್ಲಿ ಪಾಲ್ಗೊಳ್ಳುತ್ತಿದ್ದರು ಕಾರಣ ಇವರಿಗೆ ಏನೂ ತಿಳಿದಿರುವುದಿಲ್ಲ ಎಂಬ ಮನೋಭಾವ.

ಇವರು ಹೇಳುವಂತೆ ಏಶಿಯನ್ ಕ್ರೀಡಾಕೂಟದಲ್ಲಿ ಪ್ರಸ್ತುತ ವಿದೇಶಿಗರಿಗೆ ಸಡ್ಡು ಒಡೆದು ನಿಲ್ಲುವ ಮಟ್ಟಕ್ಕೆ ನಾವೀಗ ಬೆಳೆದು ನಿಂತಿದ್ದೇವೆ ಎಂದಾಗ ಮೈ, ಮನಕ್ಕೆ ರೋಮಾಂಚನವಾಯಿತು. ಏನನ್ನಾದರೂ ಸಾಧಿಸಬೇಕೆಂಬ ಹಠ ಮತ್ತು ಛಲದೊಂದಿಗೆ ಅಥ್ಲೆಟಿಕ್ಸ್‌ನ ಟ್ರ್ಯಾಕ್ ಅಂಡ್ ಫೀಲ್ಡ್ ಇವೆಂಟ್ಸ್, ಬ್ಯಾಡ್ಮಿಂಟನ್ ಹಾಗೂ ಟೆನ್ ಪಿನ್ ನಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಭಾರತಕ್ಕೆ ಕೀರ್ತಿ ತಂದ ಕ್ರೀಡಾಪಟು ಚನ್ನಕೇಶವ್.

**ಅಥ್ಲೆಟಿಕ್ಸ್ ಮತ್ತು ಬಹುಮುಖ ಕ್ರೀಡಾ ಸಾಧನೆಗಳು:** ಅಂತಾರಾಷ್ಟ್ರೀಯ ಮಟ್ಟದಲ್ಲಿ :2003 (ಹಾಂಕಾಂಗ್ )ಪೆಸಿಫಿಕ್ ಯೂಥ್ ಗೇಮ್ಸ್ 100 ಮೀ, ಓಟದಲ್ಲಿ ಕಂಚು ಮತ್ತು ಉದ್ದ ಜಿಗಿತದಲ್ಲಿ ಬೆಳ್ಳಿ., 2003(ಮ್ಯಾಂಚೆಸ್ಟರ್) ಡಿ.ಎಸ್.ಇ. ಬ್ರಿಟಿಷ್ ಓಪನ್ ಅಥ್ಲೆಟಿಕ್ ಚಾಂಪಿಯನ್ಶಿಪ್ 100 ಮೀ, ಓಟದಲ್ಲಿ ಚಿನ್ನ., 2005(ಲಕ್ನೋ) ಇಂಡೋ–ರಷ್ಯನ್ ಚಾಂಪಿಯನ್ಶಿಪ್ 100ಮೀ, ಓಟದಲ್ಲಿ ಬೆಳ್ಳಿ., 2006(ಐರ್ಲೆಂಡ್)ಐ.ಡಬ್ಲ್ಯೂ. ಎ. ಎಸ್. ವರ್ಲ್ಡ್ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್ಶಿಪ್



100 ಮೀ, ಓಟದಲ್ಲಿ ಬೆಳ್ಳಿ ಮತ್ತು ಉದ್ದ ಜಿಗಿತ ಸ್ಪರ್ಧೆಯಲ್ಲಿ ಕಂಚು., 2010 (ಯುನೈಟೆಡ್ ಕಿಂಗ್ಡಮ್)ಸಿ.ಪಿ.ಇಂಟರ್ನ್ಯಾಷನಲ್ ಗೇಮ್ಸ್ 200 ಮೀ,ಓಟದಲ್ಲಿ ಬೆಳ್ಳಿ ಮತ್ತು ಉದ್ದ ಜಿಗಿತ ಸ್ಪರ್ಧೆಯಲ್ಲಿ ಕಂಚು.,

2014(ಶಾರ್ಜಾ)4ನೇ ಶಾರ್ಜಾ ಇಂಟರ್ನ್ಯಾಷನಲ್ ಓಪನ್ ಅಥ್ಲೆಟಿಕ್ ಮೀಟ್ ಲಾಂಗ್ ಜಂಪ್ ನಲ್ಲಿ 4ನೇ ಸ್ಥಾನ., 2021(ಮಾಲ್ಡೀವ್ಸ್) ಎ.ಟಿ.ಟಿ.ಎಫ್. ಇಂಟರ್ನ್ಯಾಷನಲ್ ಪ್ಯಾರಾ ಓಪನ್ ಗೇಮ್ಸ್ 100 ಮೀ, ಓಟದಲ್ಲಿ ಬೆಳ್ಳಿ ಮತ್ತು ಉದ್ದ ಜಿಗಿತ ಸ್ಪರ್ಧೆಯಲ್ಲಿ ಚಿನ್ನ.

**ರಾಷ್ಟ್ರಮಟ್ಟದಲ್ಲಿ:** 2004(ಬೆಂಗಳೂರು) 6ನೇ ನ್ಯಾಷನಲ್ ಗೇಮ್ಸ್ ಫಾರ್ ಡಿಸೆಬಲ್ಡ್ ಎತ್ತರ ಮತ್ತು ತ್ರಿವಿಧ ಜಿಗಿತದಲ್ಲಿ ತಲಾ ಒಂದೊಂದು ಬೆಳ್ಳಿ., 2005(ಕೊಯಮತ್ತೂರು)7ನೇ ಸೀನಿಯರ್ ನ್ಯಾಷನಲ್ ಪ್ಯಾರಾಲಂಪಿಕ್ ಅಥ್ಲೆಟಿಕ್ಸ್ ಮೀಟ್ ಉದ್ದ ಜಿಗಿತ, ತ್ರಿವಿಧ ಜಿಗಿತ ಮತ್ತು 4*100 ಮೀ,ರಿಲೇ ಓಟದಲ್ಲಿ ತಲಾ ಒಂದೊಂದು ಬೆಳ್ಳಿ., 2008(ಹರಿಯಾಣ)10ನೇ ಸೀನಿಯರ್ ನ್ಯಾಷನಲ್ ಪ್ಯಾರಲಂಪಿಕ್ ಅಥ್ಲೆಟಿಕ್ ಮೀಟ್ 4*100 ಮೀ,ರಿಲೇ ಓಟದಲ್ಲಿ ಕಂಚು.

ರಾಜ್ಯಮಟ್ಟದಲ್ಲಿ: 1.2003 (ಮೈಸೂರು) 1ನೇ ಸೌತ್ ಅಥ್ಲೆಟಿಕ್ ಮೀಟ್ ಆಫ್ ಡಿಜೇಬಲ್ಡ್ 100 ಮೀ,ಓಟದಲ್ಲಿ ಕಂಚು., 2.2007 (ಮೈಸೂರು)6ನೇ ಸೌತ್ ಅಥ್ಲೆಟಿಕ್ಸ್ ಮೀಟ್ ಫಾರ್ ಡಿಜೇಬಲ್ಡ್ 100 ಮೀ, ಓಟದಲ್ಲಿ ಕಂಚು.

ಬ್ಯಾಡ್ಮಿಂಟನ್ ಕ್ರೀಡೆ: 1.2021 ಉಗಾಂಡ ದೇಶದಲ್ಲಿ ನಡೆದ ಅಂತರರಾಷ್ಟ್ರೀಯ ಪ್ಯಾರಾ ಬ್ಯಾಡ್ಮಿಂಟನ್ ಇಂಟರ್ನ್ಯಾಷನಲ್ ಟೂರ್ನಮೆಂಟ್ ನಲ್ಲಿ ಭಾಗವಹಿಸಿರುತ್ತಾರೆ.

2.2013 ಒರಿಸ್ಸಾ ಇಲ್ಲಿ ನಡೆದ ರಾಷ್ಟ್ರಮಟ್ಟದ ಸೀನಿಯರ್ ನ್ಯಾಷನಲ್ ಬ್ಯಾಡ್ಮಿಂಟನ್ ಚಾಂಪಿಯನ್ಶಿಪ್ ದ್ವಿತೀಯ ಸ್ಥಾನ.

> ಸರ್ಕಾರ ಪ್ರತಿಭೆಯನ್ನು ಗುರುತಿಸಿ ಆಟಗಾರರಿಗೆ ಬೇಕಾದ ಪರಿಕರಗಳನ್ನು ಪೂರೈಸಿ ಪ್ರೋತ್ಸಾಹಿಸಬೇಕಿದೆ. ಸಧ್ಯ ತರಬೇತಿ ಪಡೆಯಲು ಉಪಯೋಗಿಸಿಕೊಳ್ಳುತ್ತಿರುವ ಮಹಲ್ಗಳಲ್ಲಿ ಕಡಿಮೆ ದರದಲ್ಲಿ ಅವಕಾಶ ಕಲ್ಪಿಸಿ ಇಲ್ಲವೇ. ಸರ್ಕಾರವೇ ಮಹಲ್ಗಳನ್ನು ತೆರೆದು ಅಥವಾ ಈಗ ತರಬೇತಿ ಪಡೆಯುತ್ತಿರುವ ಮಹಲ್ಗಳಿಗೆ ಹಣವನ್ನು ಪಾವತಿಸಬೇಕು. ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಸರ್ಕಾರಿ ಉದ್ಯೋಗವನ್ನು ನೀಡಿ ಸಿಗುವ ಸಂಬಳದಲ್ಲಿ ತರಬೇತಿಗೆ ತಗಲುವ ವೆಚ್ಚವನ್ನು ನಿಭಾಯಿಸಲು ನಮಗೆ ಸಹಾಯವಾಗುತ್ತದೆ.
>
> – ಚೆನ್ನಕೇಶವ್.

**ಟೆನ್ ಪಿನ್ (ಬೌಲಿಂಗ್) ಅಂತರಾಷ್ಟ್ರೀಯ ಸಾಧನೆಗಳು:** 2018 ಇಂಡೋನೇಷಿಯಾ ಇಲ್ಲಿ ನಡೆದ ಪ್ಯಾರ ಏಷ್ಯನ್ ಗೇಮ್ಸ್ ಮತ್ತು ಅದೇ ವರ್ಷ ಮಲೇಶಿಯಾದಲ್ಲಿ ನಡೆದ ವರ್ಲ್ಡ್ ಪ್ಯಾರಾ ಬೌಲಿಂಗ್ ಟೂರ್ನಮೆಂಟ್ ಹಾಗೂ 2023 ಹಾಂಕಾಂಗ್ನಲ್ಲಿ ನಡೆದ 1ನೇ ಏಷಿಯನ್ ಪ್ಯಾರಾ ಟೆನ್ ಪಿನ್ ಬೌಲಿಂಗ್ ಚಾಂಪಿಯನ್ಶಿಪ್ ಭಾಗವಹಿಸಿ ಉತ್ತಮ ಪ್ರದರ್ಶನ ತೋರಿರುತ್ತಾರೆ.

ರಾಷ್ಟ್ರೀಯ ಸಾಧನೆಗಳು: 2022 (ಬೆಂಗಳೂರು) ಎರಡನೇ ಪ್ಯಾರಾ ಟೆನ್ ಪಿನ್ ಬೌಲಿಂಗ್ ಚಾಂಪಿಯನ್ಶಿಪ್ ಚಿನ್ನದ ಪದಕ ಮತ್ತು 2023 (ಬೆಂಗಳೂರು )3ನೇ ಪ್ಯಾರಾ ಟೆನ್ ಪಿನ್ ಬೌಲಿಂಗ್ ಚಾಂಪಿಯನ್ಶಿಪ್ ವೈಯಕ್ತಿಕ ವಿಭಾಗದಲ್ಲಿ ಬೆಳ್ಳಿ ಮತ್ತು ಡಬಲ್ಸ್ ನಲ್ಲಿ ಬೆಳ್ಳಿ ಪದಕ ಗಳಿಸಿರುತ್ತಾರೆ.

ಅಂತರಾಷ್ಟ್ರೀಯ ಮಟ್ಟಗಳಲ್ಲಿ ಭಾರತ ದೇಶವನ್ನು ಪ್ರತಿನಿಧಿಸಿ ದೇಶದ ಕೀರ್ತಿಯನ್ನು ಬೆಳಗಿಸಲು ಹೊರಟಿರುವ ಇವರಿಗೆ ಹೆಗ್ಗಿಲ್ಲದೆ ಕಾಡುತ್ತಿದೆ ಬಡತನ ಮತ್ತು ತರಬೇತಿಗೆ ಬೇಕಾದ ಒಳಾಂಗಣ ಕ್ರೀಡಾಂಗಣ.

ಎಬಲ್ ಬಾಡಿಯ ಪ್ರೆಸಿಡೆಂಟ್ ಕಣ್ಣನ್, ಎಚ್.ಎನ್.ಗಿರೀಶ್ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಕ್ರೀಡಾಪಟು, ರಾಘವೇಂದ್ರ, ಪಿ.ಬಸವರಾಜ್ ಹೊರಡ್ಡಿ ,ಸತ್ಯನಾರಾಯಣ್,ಪಿ.ಸಿ.ಐ.ನ ಸರ್ವ ಸದಸ್ಯರು,ರಮೇಶ್ ಮತ್ತು ಯತೀಶ್ ಅಥ್ಲೆಟಿಕ್ಸ್ ತರಬೇತುದಾರರು, ಆನಂದ್ ಬ್ಯಾಡ್ಮಿಂಟನ್ ತರಬೇತುದಾರರು ಹಾಗೂ ತಮ್ಮ ಕುಟುಂಬದ ಎಲ್ಲಾ ಸದಸ್ಯರ ಸಹಕಾರ, ಮಾರ್ಗದರ್ಶನ ಮತ್ತು ಸಹಾಯವನ್ನು ಸ್ಮರಿಸುತ್ತಾರೆ.

ಆರ್ಥಿಕ ಸಹಕಾರದ ನಿರೀಕ್ಷೆಯಲ್ಲಿರುವ ಈತನಿಗೆ ಉಳ್ಳವರು, ಜನಪ್ರತಿನಿಧಿಗಳು, ಸಂಘ ಸಂಸ್ಥೆಗಳು ಮತ್ತು ಕ್ರೀಡಾ ಪ್ರೋತ್ಸಾಹಕರು ಸಹಾಯ ಮಾಡಿ ಮುಂಬರುವ ಒಲಂಪಿಕ್ಸ್ ನಲ್ಲಿ ಭಾರತಕ್ಕೆ ಪದಕ ತರುವ ನಿಟ್ಟಿನಲ್ಲಿ ಅಗತ್ಯ ಪ್ರೋತ್ಸಾಹ ನೀಡಬೇಕಿದೆ. ಕ್ರೀಡಾ ಸಾಧಕ ಚನ್ನಕೇಶವ್ (ಸಂಪರ್ಕಿಸಿ – 7411005632) ಪ್ರೋತ್ಸಾಹಿಗಳ ನಿರೀಕ್ಷೆಯಲ್ಲಿದ್ದಾನೆ.



# ಮನಸೂರೆಗೊಂಡ 9ನೇ ಸಂಗೀತ ಬೈಠಕ್

■ ಹಂಪಿ ಟೈಮ್ಸ್ ಬಳ್ಳಾರಿ

ಸೂರ್ಯನಗರಿ ಬಳ್ಳಾರಿಯಲ್ಲೀಗ ಬಿಸಿಲು ಸುರಿಯುತ್ತಿದ್ದರೆ ಸಮಾನ ಮನಸ್ಕ ಸಂಗೀತಗಾರರೆಲ್ಲ ಸೇರಿಕೊಂಡು 'ಸಂಗೀತದ ಬೈಠಕ್' ಆಯೋಜಿಸುವ ಮೂಲಕ ಸಪ್ತಸ್ವರಗಳ ನಿನಾದವನ್ನು ಮೊಳಗಿಸುತ್ತಿದ್ದಾರೆ.

ಸಂಗೀತ ಶಾರದೆಯ ಧಮನಿಯಲ್ಲಿ ಮೂಡಿ ಬರುವ ಸರಿಗಮಪದನಿ ಸ್ವರಗಳ ಲಯ, ತಾಳ ಮತ್ತು ಮೇಳಗಳ ನಡುವೆ ಬಿಸಿಲಿನ ಬಿಸಿಯಲ್ಲೂ ಸಂಗೀತದ ಪಸೆ ಪಸರಿಸುತ್ತಿದ್ದಾರೆ. ಆ ಮೂಲಕ ಸಂಗೀತ ಸರಸ್ವತಿಯ ಆರಾಧನೆ ಮಾಡುತ್ತಿದ್ದಾರೆ. ನಗರದ ಬಹುತೇಕ ಸಂಗೀತಾಸಕ್ತರು, ಸಂಗೀತ ಪ್ರೇಮಿಗಳು ಈ 'ಸಂಗೀತ ಬೈಠಕ್ ಕಾರ್ಯಕ್ರಮ' ವನ್ನು ಉತ್ತೇಜಿಸುತ್ತಿದ್ದು, ಇದು 9ನೇ ಕಾರ್ಯಕ್ರಮವಾಗಿದೆ. ಆಯಾ ತಿಂಗಳ ಯಾವುದಾದರೂ ಒಂದು ಭಾನುವಾರ ಆಯ್ಕೆ ಮಾಡಿಕೊಂಡು 'ಸಂಗೀತ ಬೈಠಕ್'



ನಡೆಸಲಾಗುತ್ತದೆ. ಈ ಬಾರಿ ಗಾಂಧಿನಗರ ಬಾಲಭಾರತಿ ಶಾಲೆಯ ಮುಂಭಾಗದಲ್ಲಿನ ಮೀನಾಕ್ಷಿ ನಿಲಯದಲ್ಲಿ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿತ್ತು. ಆ ಮೂಲಕ ಸಂಜೆಯ ಸೊಬಗಿಗೆ ಸಂಗೀತದ ರಸಸ್ಪರ್ಶ ಸ್ಪುರಿಸಿದರು.

ಪ್ರತಿ 'ಸಂಗೀತ ಬೈಠಕ್' ನಲ್ಲಿ ಓರ್ವ ಹಿರಿಯ ಸಂಗೀತ ಕಲಾವಿದರು ಮತ್ತು ಓರ್ವ ಕಿರಿಯ ಸಂಗೀತ ಕಲಾವಿದರನ್ನು ಆಹ್ವಾನಿಸಿ ಕಾರ್ಯಕ್ರಮ ಆಯೋಜಿಸುವುದು ವಾಡಿಕೆ. ಈ ಬಾರಿ ಡ್ರೀಮ್ ವರ್ಲ್ಡ್ ಶಾಲೆಯ 6ನೇ ತರಗತಿ ವಿದ್ಯಾರ್ಥಿನಿ, ದಿ.ವಿಜಯಾ ಕಿಶೋರ್ ಮತ್ತು ಹಾಲಿ ದೊಡ್ಡಯ್ಯ ಕಲ್ಲೂರು ಅವರ ಶಿಷ್ಯೆ ಎಂ.ಎಸ್. ಜಯಲಕ್ಷ್ಮಿ ಇವರು ಮಿಯಾ ಮಲ್ಹಾರ್ ರಾಗದಲ್ಲಿ ಗಾಯನ ಆರಂಭಿಸಿ ಶ್ರೋತೃಗಳ ಮನ ತಣಿಸಿದರು. ದಾಸರ ಪದಗಳು, ಅಭಂಗ ಮತ್ತು ಮೀರಾ ಭಜನ್ ಹಾಡಿದರು. 2 ತಾಸಿನ ಈ ಕಾರ್ಯಕ್ರಮದಲ್ಲಿ ಪ್ಯೂಪಿಲ್ ಟ್ರೀ ಅಕಾಡೆಮಿಯ ಸಂಗೀತ ಶಿಕ್ಷಕ ರಾಘವೇಂದ್ರ ಗುಡದೂರು ಇವರು ಸಹಿತ ಮುಲ್ತಾನಿ ರಾಗದಲ್ಲಿ ಗಾಯನ ಆರಂಭಿಸಿ, ಪುರಂದರ ದಾಸರ 'ಕರುಣಿಸೋ ರಂಗಾ ಕರುಣಿಸೋ' ಭೈರವಿ ರಾಗದಲ್ಲಿ ಪ್ರಸ್ತುತ ಪಡಿಸಿ ಸಂಗೀತಾಸಕ್ತರನ್ನು ಸಂತೃಪ್ತಗೊಳಿಸಿದರು.

ಪದ್ಮಜಾ ಅರಳಿಕಟ್ಟೆ, ಪೋಲಕ್ಸ್ ಹನುಮಂತಪ್ಪ ಮತ್ತು ಎರೇಗೌಡ ಅವರು ಹಾರ್ಮೋನಿಯಮ್ ಸಾಥ್ ನೀಡಿದರೆ, ಹಿರಿಯ ಪತ್ರಕರ್ತರು ಮತ್ತು ಸಂಗೀತಗಾರರಾದ ಎಂ.ಅಹಿರಾಜ್, ಶಿವಪ್ರಕಾಶ್ ವಸ್ತ್ರದ್, ಪವಮಾನ ಅರಳಿಕಟ್ಟೆ ಮತ್ತು ಹರ್ಷಾ ಆಚಾರ್ ಅವರು ತಬಲಾ ಸಾಥ್ ನೀಡಿದರು.